## ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**

ಸಂಖ್ಯೆ: ಪಪೂಶಿಇ/ಇ-ಆಡಳಿತ/ಬಪವಿ/2018-19 ದಿನಾಂಕ;07/06/2018

**ಸುತ್ತೋಲೆ**

**ವಿಷಯ** : ಪದವಿ ಪೂರ್ವ ಶಿಕ್ಷಣ ಇಲಾಖೆಯ ಪಿ.ಯು ಪೋರ್ಟಲ್‌ನಲ್ಲಿ ವಿದ್ಯಾರ್ಥಿಗಳ ದಾಖಲಾತಿ ಮಾಹಿತಿ ಹಾಗೂ ಬಿ.ಎಂ.ಟಿ.ಸಿ ಬಸ್ ಪಾಸ್‌ಗಳಗಾಗಿ ವಿದ್ಯಾರ್ಥಿಗಳ ಮಾಹಿತಿಯನ್ನು ಅಳವಡಿಸುವ ಬಗ್ಗೆ.

**ಉಲ್ಲೇಖ**: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಶಾಂತಿನಗರ ಬೆಂಗಳೂರು-27 ಇವರ ಪತ್ರ ಸಂಖ್ಯೆ: ಬೆಂ.ಮ.ಸಾ.ಸಂಸ್ಥೆ:ಕೇಕ:ಮುಸಂವ್ಯ: ಆ:ಸಾ: 878 ದಿನಾಂಕ: 06-06-2015

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸರ್ಕಾರವು ಪ್ರಸಕ್ತ ವರ್ಷದ ಆಯವ್ಯಯದಲ್ಲಿ ಪ್ರಸ್ತುತ ಸಾಲಿನಿಂದ ಎಲ್ಲಾ ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿ ಪಾಸುಗಳನ್ನು ಉಚಿತವಾಗಿ ವಿತರಣೆ ಮಾಡುವುದಾಗಿ ಘೋಷಿಸಿದ್ದ ಹಿನ್ನಲೆಯಲ್ಲಿ 2018-19 ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸುಗಳನ್ನು ವಿತರಿಸಲಾಗುವುದು ಎಂದು ತಿಳಿಸಲಾಗಿತ್ತು.

ಆದರೆ ಸರ್ಕಾರದಿಂದ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಪಾಸುಗಳನ್ನು ವಿತರಿಸಲು ಆದೇಶಿಸಿರುವುದರಿಂದ, ಪಿಯುಸಿ ವಿದ್ಯಾರ್ಥಿಗಳಿಗೆ ಈ ಕೆಳಕಂಡ ದರದಂತೆ ಪಾಸನ್ನು ವಿತರಿಸಲಾಗುವುದು ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರು ಉಲ್ಲೇಖಿತ ಪತ್ರದಲ್ಲಿ ತಿಳಿಸಿರುತ್ತಾರೆ.

| ಕ್ರಮ ಸಂಖ್ಯೆ | ವರ್ಗ | ಅವಧಿ | ಪ್ರಯಾಣ ಶುಲ್ಕ | ಸೇವಾ ಶುಲ್ಕ & ಸ್ಮಾರ್ಟ್‌ಕಾರ್ಡ್ ಶುಲ್ಕ | ಒಟ್ಟು ದರ |
|---|---|---|---|---|---|
| 1. | ಪಿಯುಸಿ ವಿದ್ಯಾರ್ಥಿಗಳಿಗೆ | 10 ತಿಂಗಳಿಗೆ | 900 | 200 | 1100 |
| 2. | ಪಿಯುಸಿ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ | 10 ತಿಂಗಳಿಗೆ | ಉಚಿತ | 200 | 200 |

ಈ ಹಿನ್ನಲೆಯಲ್ಲಿ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿಯ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್‌ಗಳನ್ನು ಹಾಗೂ ಇತರೆ ಪಿಯು ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ ಧರದಲ್ಲಿ ಬಸ್ ಪಾಸ್‌ಗಳನ್ನು ಕಾಲೇಜಿನ ಪ್ರಾಂಶುಪಾಲರ ಮೂಲಕ ನೀಡಬೇಕಾಗಿದ್ದು, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಮಾಹಿತಿಯು ಆನ್‌ಲೈನ್ ಪೋರ್ಟಲ್‌ನಲ್ಲಿ ಈಗಾಗಲೇ ಲಭ್ಯವಿದ್ದು ಪ್ರಥಮ ಪಿ.ಯು.ಸಿಯ ವಿದ್ಯಾರ್ಥಿಗಳ ದಾಖಲಾತಿಯ ಪ್ರಕ್ರಿಯೆ ನಡೆದಿದ್ದು ಈಗಾಗಲೇ ದಾಖಲಾತಿ ಹೊಂದಿರುವ ವಿದ್ಯಾರ್ಥಿಗಳ ಮಾಹಿತಿಯನ್ನು ಪೋರ್ಟಲ್‌ನಲ್ಲಿ ಭರ್ತಿ ಮಾಡಲು ಈ ಮೂಲಕ ತಿಳಿಸಿದೆ. ಪ್ರಥಮ ಮತ್ತು ದ್ವಿತೀಯ ಪಿಯುಸಿಯ ಬಸ್‌ಪಾಸ್ ಅವಶ್ಯಕತೆಯಿರುವ ವಿದ್ಯಾರ್ಥಿಗಳಿಗೆ ಸದರಿ ಕಾಲೇಜಿನ ಪ್ರಾಂಶುಪಾಲರು ಬಿ.ಎಂ.ಟಿ.ಸಿಯವರ ಸೇವಾ ಶುಲ್ಕವಾದ ರೂ. 200/- ಗಳನ್ನು ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಂದ ಹಾಗೂ ಇತರೆ ಪಿಯು ವಿದ್ಯಾರ್ಥಿಗಳಿಂದ ರೂ. 1100/- ಪಡೆದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ವಿದ್ಯಾರ್ಥಿಗಳಿಗೆ ಪಾಸ್ ಒದಗಿಸಲು ಈ ಮೂಲಕ ತಿಳಿಸಿದೆ. ಉಲ್ಲೇಖಿತ ಪತ್ರವನ್ನು ಹಾಗೂ ಅನುಬಂಧ-1ನ್ನು ಮಾಹಿತಿಗಾಗಿ ಲಗತ್ತಿಸಿದೆ.

...2

ಬಸ್ ಪಾಸ್‌ಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸೂಚನೆಗಳು.

1. ಪಿ.ಯು ಆನ್‌ಲೈನ್ ಪೋರ್ಟಲ್‌ಗೆ ಲಾಗ್‌ಇನ್ ಆಗುವುದು.
2. ಬಿ.ಎಂ.ಟಿ.ಸಿ ಮೆನು ಲಿಂಕ್‌ನ್ನು ಕ್ಲಿಕ್ ಮಾಡುವುದು.
3. ವೀವ್ ಸ್ಟೂಡೆಂಟ್ ಎನ್‌ರೋಲ್ಡ್ ಲಿಸ್ಟ್ ಕ್ಲಿಕ್ ಮಾಡುವುದು.
4. ಕ್ಲಿಕ್ ಅಪ್ಲೇ ಫಾರ್ ಬಸ್ ಪಾಸ್ ಲಿಂಕ್‌ಗೆ ಹೋಗಿ ವಿದ್ಯಾರ್ಥಿಗಳ ವಿಳಾಸ ಮತ್ತು ಪ್ರಯಾಣದ ವಿವರ ಎಲ್ಲಿಂದ ಎಲ್ಲಿಗೆ, ಮಾರ್ಗ ಬದಲಾವಣೆ ಸ್ಥಳವನ್ನು ಭರ್ತಿ ಮಾಡಿ ನಂತರ ಸಬ್ಮಿಟ್ ಬಟನ್‌ನ್ನು ಒತ್ತುವುದು.
5. ನಂತರ ಬಿ.ಎಂ.ಟಿ.ಸಿ ರವರಿಂದ ದೊರೆತ ಪಾಸ್‌ಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸುವುದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

**ಪ್ರತಿಗಳು,**

1. ಬಿ.ಎಂ.ಟಿ.ಸಿ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಉಪನಿರ್ದೇಶಕರುಗಳಿಗೆ ಮಾಹಿತಿಗಾಗಿ.
2. ಬಿ.ಎಂ.ಟಿ.ಸಿ ವ್ಯಾಪ್ತಿಯಲ್ಲಿ ಬರುವ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಮುಂದಿನ ಕ್ರಮಕ್ಕಾಗಿ.
3. ಬಿ.ಎಂ.ಟಿ.ಸಿ ವ್ಯಾಪ್ತಿಯಲ್ಲಿ ಬರುವ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ- ಮಾಹಿತಿಗಾಗಿ.
4. ನಿರ್ದೇಶಕರ ಆಪ್ತಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ.
5. ಕಛೇರಿ ಪ್ರತಿ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಲಭ್ಯವನ್ನು ಕಲ್ಪಿಸಲು ಬಿ.ಬಿ.ಎಂಪಿ ವ್ಯಾಪ್ತಿಯಿಂದ 25 ಕಿ.ಮೀ ವರೆಗೂ ಮಾರ್ಗಗಳನ್ನು ಕಾರ್ಯಾಚರಣೆ ಮಾಡುತ್ತಿದೆ.

ಈ ರೀತಿ ಕಾರ್ಯಾಚರಣೆ ಮಾಡುತ್ತಿರುವ ಬೆಂ.ಮ.ಸಾ.ಸಂಸ್ಥೆಯ ವಲಯವಾರು ವ್ಯಾಪ್ತಿಯು ಈ ಕೆಳಕಂಡಂತಿದೆ.

| ಕ್ರ.ಸಂ | ವಲಯ | ವ್ಯಾಪ್ತಿ |
|---|---|---|
| 1. | ಮೈಸೂರು ರಸ್ತೆ | ಮಾಯಗಾನಹಳ್ಳಿ |
| 2 | ಮಾಗಡಿ ರಸ್ತೆ | ಬಿಸ್ಕೂರು |
| 3 | ನೆಲಮಂಗಲ ರಸ್ತೆ | ದಾಬಸ್‌ಪೇಟೆ |
| 4 | ದೊಡ್ಡಬಳ್ಳಾಪುರ ರಸ್ತೆ | ಕೊಡಿಗೇಹಳ್ಳಿ ದೊಡ್ಡಬಳ್ಳಾಪುರ |
| 5 | ದೇವನಹಳ್ಳಿ ರಸ್ತೆ | ಕಾರಹಳ್ಳಿ |
| 6 | ಹೊಸಕೋಟೆ ರಸ್ತೆ | ಕೊರಟಿ, ವಿಜಯಪುರ |
| 7 | ಹೂಡಿ ರಸ್ತೆ | ಜಯಮಂಗಲ |
| 8 | ಅತ್ತಿಬೆಲೆ ರಸ್ತೆ | ಅತ್ತಿಬೆಲೆ ಗಡಿ |
| 9 | ಆನೇಕಲ್ | ಸಮಂದೂರು |
| 10 | ಕನಕಪುರ ರಸ್ತೆ | ಮರಳುವಾಡಿ |

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ : ಕೇಂದ್ರ ಕಛೇರಿ : ಶಾಂತಿನಗರ: ಬೆಂಗಳೂರು-27.**

**ಸಂಖ್ಯೆ : ಬೆಂ.ಮ.ಸಾ.ಸಂಸ್ಥೆ : ಕೇಕ : ಮುಸಂವ್ಯ: ಆ: ಸಾ: 598 : 2018-19 ದಿನಾಂಕ : 06 .06.2018**

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ,
ಕರ್ನಾಟಕ ಸರ್ಕಾರ,
ಪದವಿ ಪೂರ್ವ ಶಿಕ್ಷಣ ಭವನ,
18ನೇ ಕ್ರಾಸ್, ಸಂಪಿಗೆ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 12.

**ಮಾನ್ಯರೇ,**

**ವಿಷಯ:** 2018-19 ನೇ ಸಾಲಿನ ವಿದ್ಯಾರ್ಥಿ ಪಾಸುಗಳನ್ನು ರಿಯಾಯಿತಿ ದರದಲ್ಲಿ ವಿತರಣೆ ಮಾಡುವ ಬಗ್ಗೆ.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸರ್ಕಾರವು ಪ್ರಸಕ್ತ ವರ್ಷದ ಆಯವ್ಯಯದಲ್ಲಿ ಪ್ರಸ್ತುತ ಸಾಲಿನಿಂದ ಎಲ್ಲಾ ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿ ಪಾಸುಗಳನ್ನು ಉಚಿತವಾಗಿ ವಿತರಣೆ ಮಾಡುವುದಾಗಿ ಘೋಷಿಸಿದ್ದ ಹಿನ್ನೆಲೆಯಲ್ಲಿ 2018-19 ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸುಗಳನ್ನು ವಿತರಿಸಲಾಗುವುದು ಎಂದು ತಿಳಿಸಲಾಗಿತ್ತು.

ಆದರೆ ಸರ್ಕಾರದಿಂದ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಪಾಸುಗಳನ್ನು ವಿತರಿಸಲು ಆದೇಶಿಸಿರುವುದರಿಂದ, ಪಿ.ಯು.ಸಿ ವಿದ್ಯಾರ್ಥಿಗಳಿಗೆ ಈ ಕೆಳಕಂಡ ದರದಂತೆ ಪಾಸನ್ನು ವಿತರಿಸಲಾಗುವುದು

| ಕ್ರಮ ಸಂಖ್ಯೆ | ವರ್ಗ | ಅವಧಿ | ಪ್ರಯಾಣ ಶುಲ್ಕ | ಸೇವಾ ಶುಲ್ಕ & ಸ್ಮಾರ್ಟ್‌ಕಾರ್ಡ್ ಶುಲ್ಕ | ಒಟ್ಟು ದರ |
|---|---|---|---|---|---|
| 1 | ಪಿಯುಸಿ ವಿದ್ಯಾರ್ಥಿಗಳಿಗೆ | 10 ತಿಂಗಳಿಗೆ | **900** | 200 | **1100** |
| 2 | ಪಿ.ಯು.ಸಿ ಎಸ್/ಎಸ್‌ಟಿ ವಿದ್ಯಾರ್ಥಿಗಳಿಗೆ | 10 ತಿಂಗಳಿಗೆ | **ಉಚಿತ** | 200 | **200** |

ವಂದನೆಗಳೊಂದಿಗೆ.

ತಮ್ಮ ವಿಶ್ವಾಸಿ,
-ಸಹಿ-
**ವ್ಯವಸ್ಥಾಪಕ ನಿರ್ದೇಶಕರು**
**ಬೆಂ.ಮ.ಸಾ.ಸಂಸ್ಥೆ.**